ಪವರ್‌ಕಮಿಶನ್‌ರವರು ಅಪ್ರೂವ್ ಮಾಡಿಲ್ಲ ಆದರೆ ಸುಮಾರು ೨೦-೨೫ ದಿವಸಗಳಿಂದ ಈ ಬಗ್ಗೆ ಒಂದು ಒತ್ತಡ ಇದ್ದುದನ್ನು ಮಾಡದೇ ಇದ್ದುದರಿಂದ, ಈವೊತ್ತು ಅದನ್ನು ಮಾಡಿಸಿದ್ದಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ೨೯ನೇ ತಾರೀಖಿಗೆ ಅಪ್ರೊಪ್ರಿಯೇಷನ್ ಬಜೆಟ್ ಆಗಬೇಕು ಎಂದು ಹೇಳುತ್ತಿದ್ದಾರೆ. ಅವರು ಹೇಳುವುದು ಸರಿಯಾಗಿದೆ. ಆದರೆ ವಿಷಯಗಳ ಮಹತ್ವವನ್ನು ಆರಿತು ಸಭೆಯನ್ನು ಮೊದಲೇ ಕರೆಯ ಬೇಕಾಗಿತ್ತು. ಬಜೆಟ್ ಮಾಂಜೂರು ಮಾಡಿಸಿಕೊಳ್ಳುವುದು ಪ್ರಾಮುಖ್ಯವಾದುದು ಹೌದು. ಆದೇ ರೀತಿಯಲ್ಲಿ ರಾಜ್ಯಕ್ಕೆ ಸಂಬಂಧಪಟ್ಟಂಥ ಪ್ರಾಮುಖ್ಯವಾದ ವಿಚಾರಗಳ ಚರ್ಚೆ ಮಾಡುವುದು ಕೂಡ ಅಷ್ಟೇ ಮುಖ್ಯವಾದುದಾಗಿದೆ. ಕೆಲವು ವಿಚಾರಗಳಲ್ಲಿ ವಾರಗಟ್ಟಲೆ ಚರ್ಚೆ ಮಾಡಬೇಕೆಂದರೆ ಅದು ಆಗುವುದಿಲ್ಲ ಎಂಬುದನ್ನು ಒಪ್ಪುವುದಾದರೂ, ರಾಜ್ಯದ ಹಿತಾಸಕ್ತಿಗೆ ಸಂಬಂಧಪಟ್ಟಂಥ ವಿಚಾರಗಳು ಬಂದಾಗ ಇರುವ ಬಿಟ್ಟು ಹಾಡುಗಳನ್ನು ಬಿಟ್ಟು ಚರ್ಚೆ ಮಾಡಬೇಕಾಗುತ್ತದೆ. ನಮ್ಮ ರಾಜ್ಯದ ಜನಗಳ ಸಮಸ್ಯೆಗಳು ಬೇರಾದರೂ ಇದ್ದರೆ ಅದನ್ನು ಇಲ್ಲಿ ನಾವುಗಳು ಚರ್ಚೆ ಮಾಡಲೇ ಬೇಕಾಗುತ್ತದೆ. ಅಂತಹ ಮುಖ್ಯವಾದ ಸಮಸ್ಯೆಯ ಕುರಿತು ಆಗಬೇಕಾದ ಚರ್ಚೆಯನ್ನು ಯಾವುದೇ ನೆಪದಲ್ಲಿ ಹೊಟಕು ಮಾಡ ಬಾರದು ಎಂದು ನಮ್ಮ ಮಾದದ ಉದ್ದೇಶವಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಹಾಗಾದರೆ ನಾಳೆಯ ದಿವಸ ಈ ಚರ್ಚೆಯನ್ನು ಇಟ್ಟುಕೊಳ್ಳೋಣ. ಇವೊತ್ತು ನಮ್ಮ ರಾಷ್ಟ್ರಪತಿಗಳು ಇಲ್ಲಿನ ಸರ್ಕಾರಂಭಕ್ಕೆ ಆಗಮಿಸಲಿದ್ದಾರೆ. ಆ ಸಮಾರಂಭದಲ್ಲಿ ಉಪಸ್ಥಿತರಲು ನಮ್ಮ ಈ ಸದನವನ್ನು ಮೂರುವರೆ ಗಂಟೆಗೆ ಒಂದು-ಒಂದಾಕಾಲಕ್ಕೂ ಗಂಟೆಯ ಅವಧಿಗೆ ಆಡ್‌ಜರ್ನ್ ಮಾಡುವಂಥ ಸಂದರ್ಭ ಒದಬಹುದು ಆ ಒಂದು ಸಮಾರಂಭದಲ್ಲಿ ನಾವು ಭಾಗವಹಿಸಿ ಅವರಿಗೆ ಗೌರವ ಸೂಚಲಿಕ್ಕೆ ಹೋಗುವುದು ಒಳ್ಳೆಯದು

ಅಧ್ಯಕ್ಷರು. ನಾಳೆ ಐದು ಗಂಟೆಗೆ ಈ ಕುರಿತು ಚರ್ಚೆ ಇಟ್ಟುಕೊಳ್ಳೋಣ. ಬೇಕಾದರೆ ಎರಡು ಗಂಟೆಯ ಕಾಲ ಚರ್ಚೆ ಆಗಲಿ.

ಶ್ರೀ ಎಂ. ಪಂಚಿಕಾರ್ಜುನ ಏರ್ಗ.—ಜೆಲಿಗೂ ಗಂಗಾ ವಿಚಾರದಲ್ಲಿ ಸಂಪೂರ್ಣವಾಗಿ ಚರ್ಚೆಯಾಗ ಬೇಕೆಂದು ಅನೇಕ ಜನ ಸದಸ್ಯರು ಬಯಸಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ಇದರ ಬಗ್ಗೆ ಮತಹೇದ ಬೇಡ. ನೀವು ಒಂದು ತೀರ್ಮಾನ ಮಾಡಿ. ನೀವು ಮಾಡಿದ ತೀರ್ಮಾನವನ್ನು ನಾವು ಒಪ್ಪುತ್ತೇವೆ.

ಅಧ್ಯಕ್ಷರು.—ಈ ನಿಲುವಳಿ ಸೂಚನೆಯನ್ನು ಪಿರಸ್ಕೃತ ಮಾಡಿದ್ದೇನೆ. ಈ ವಿಷಯಕ್ಕೆ ಕುರಿತು ನಾಳೆಯ ದಿವಸ ಐದು ಗಂಟೆಗೆ ನಿಯಮ ೬೮ರ ಕೆಳಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಡುತ್ತೇನೆ.

ಈಗ, ಗಮನ ಸೆಳೆಯುವ ಸೂಚನೆಗಳು. ಶ್ರೀಯುತರುಗಳಾದ ವೇದಾಂತ ಹೆಬ್ಬಾಗಿ ಮತ್ತು ಜಿ. ಜಿ. ಜಡಿಬಿಂದಿಯವರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಹಿಂಡಿರುವುದು.

ಗಮನ ಸೆಳೆಯುವ ಸೂಚನೆ

ಭಾರತ ಸೇವಾದಳಕ್ಕೆ ೧೯೮೭-೮೮ನೇ ಸಾಲಿನಲ್ಲಿ ಸರ್ಕಾರ ಅನುದಾನವನ್ನು ನಿಲ್ಲಿಸಿರುವುದು

ಶ್ರೀ ವೇದಾಂತ ಹೆಬ್ಬಾಗಿ.—ಅಧ್ಯಕ್ಷರೇ, "ಕರ್ನಾಟಕ ರಾಜ್ಯದಲ್ಲಿರುವ ಭಾರತ ಸೇವಾದಳಕ್ಕೆ ೧೯೮೭-೮೮ನೇ ಸಾಲಿನ ಅನುದಾನವನ್ನು ಸರ್ಕಾರವು ನಿಲ್ಲಿಸಿರುವ ಬಗ್ಗೆ ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಎಲ್. ಶಂಕರ್ (ಯುವ ಜನ ಸೇವಾ ಮತ್ತು ಕ್ರೀಡಾ ರಾಜ್ಯಮಂತ್ರಿಯವರು). —ಅಧ್ಯಕ್ಷರೇ, "ಪೊಜನೇತರ ವೆಚ್ಚವನ್ನು ತಡೆಗಟ್ಟಲು ಎಫ್‌ಡಿ ೧೫ ಬಿಯುಡಿ ೮೭, ದಿ॥ ೪-೫-೧೯೮೭ರ ಸರ್ಕಾರಿ ಆದೇಶದಲ್ಲಿ ಭಾರತ ಸೇವಾದಳಕ್ಕೆ ಅನುದಾನ ನೀಡಿಕೆಯನ್ನು ನಿಲ್ಲಿಸಲಾಯಿತು. ಈ ಅನುದಾನ ನಿಲ್ಲಿಸುವುದರಿಂದ ರೂ. ೭ ೦೦ ಲಕ್ಷ ಉಳಿತಾಯವಾಗುವುದೆಂದು ಲೆಕ್ಕಹಾಕಲಾಯಿತು.

ಈ ಅನುದಾನ ನಿಲ್ಲಿಸುವುದರ ಬಗ್ಗೆ ಹಲವಾರು ಮನವಿಗಳನ್ನು ಸ್ವೀಕರಿಸಿದ್ದು ಈ ವಿಷಯವನ್ನು ಪುನಃ ಪರಿಶೀಲಿಸಲಾಯಿತು.